ನಿಲುವುಗಳಿಗೆ ವ್ಯತಿರಿಕ್ತವಾಗಿ ಒಡಮೂಡಿದ ವೈಚಾರಿಕ ನಡೆಗಳು ಸೃಷ್ಟಿಸಿದ ವಾಗ್ವಾದ, ಸಂವಾದಗಳನ್ನೂ ಖಚಿತವಾಗಿ ಚರ್ಚಿಸಲಾಗಿದೆ. ಪ್ರತಿಯೊಂದು ಚರ್ಚೆಯನ್ನು ನಿರ್ದಿಷ್ಟ ತಾತ್ವಿಕ ನೋಟಕ್ರಮದಿಂದ ಪರಿಶೀಲಿಸಿ ಅರ್ಥೈಸಲಾಗಿದೆ. ಹಾಗಾಗಿ ನುಡಿ ಅಳಿವಿನ ಪರಿಣಾಮಗಳನ್ನು ಮುನ್ನೆಲೆಗೆ ತರುವ ಮೂಲಕ ಯಾವ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಹಾಗೂ ಆರ್ಥಿಕ ಉದ್ದೇಶವನ್ನು ಪರಿಗಣಿಸಲಾಗುತ್ತದೆಯೋ, ಅದೇ ಉದ್ದೇಶಗಳನ್ನು, ಜನರ ಬದುಕಿನ ಏಳಿಗೆಗೆ ಸಂಬಂಧಿಸಿದಂತೆ, ಹೇಗೆ ಮರೆಮಾಚಲಾಗಿದೆ ಅನ್ನುವುದನ್ನು ಅರಿಯುವುದಕ್ಕೆ ಬೇಕಾದ ಸಂಗತಿಗಳನ್ನು ಮುಂದಿಟ್ಟುಕೊಂಡು, ನುಡಿ ಅಳಿವಿನ ಸಂಕಥನವನ್ನು ತಾತ್ವಿಕವಾಗಿ ಮತ್ತು ಪ್ರಾಯೋಗಿಕ ನಿದರ್ಶನಗಳ ಮೂಲಕ ಚರ್ಚಿಸಲಾಗಿದೆ.

ನುಡಿಯ ಮೂಲಕ ಏರ್ಪಟ್ಟಿರುವ ಮೇಲು-ಕೀಳಿನ ನಂಬಿಕೆಗಳು ನುಡಿಯ ಮುಖೇನ ಮೈದೋರಿದ ಚಿಂತನಾ ಕ್ರಮಗಳು ಹಾಗೂ ನುಡಿಗಳು ತಮ್ಮ ವಿಕಾಸದಲ್ಲಿ ತಲುಪುವ 'ಪ್ರಬುದ್ಧ' ಹಂತಗಳಿಗೆ ಸಂಬಂಧಿಸಿದ ವಿಚಾರಗಳು, ಈ ಪುಸ್ತಕದ ಪ್ರಮುಖ ಚಿಂತನೆಗಳಾಗಿರುತ್ತವೆ. ನುಡಿಗಳನ್ನು ಸಮುದಾಯಗಳ ಗುರುತು ಎಂದು ತಿಳಿಯುವ ನೆಲೆ ಕೆಲವೊಮ್ಮೆ ವಿಪರ್ಯಾಸದ ಸಂದರ್ಭಗಳಿಗೆ ಕಾರಣವಾಗುವುದುಂಟು. ಜನಾಂಗಗಳನ್ನು ಅಳಿಸಿ ಹಾಕುವ, ಅವುಗಳ ಚಹರೆಯನ್ನು ಇಲ್ಲವಾಗಿಸುವ ಮುಖ್ಯ ಗುರಿಯ ಸಾಧನೆಗೆ ನುಡಿಗಳ ಅಳಿವು ಒಂದು ಪರಿಕರವಾಗಿ ಬರುತ್ತದೆ. ವಲಸೆ, ಆರ್ಥಿಕ, ಸಾಮಾಜಿಕ, ರಾಜಕೀಯ ಕಾರಣಗಳಿಂದ ಚಹರೆಗಳನ್ನು ಅಳಿಸಿ ಹಾಕುವ ಹುನ್ನಾರಗಳು ನಡೆಯುತ್ತವೆ. ನುಡಿಗಳು ಅಳಿದಾಗ, ಪರಿಣಾಮವಾಗಿ ಏನಾಗುತ್ತದೆ ಅನ್ನುವುದನ್ನು ನಿರ್ದಿಷ್ಟ ತಾತ್ವಿಕ ನಿಲುವುಗಳಿಂದ ವಿಶ್ಲೇಷಿಸಲಾಗಿದೆ. ಬೋಅಸ್, ಹಮನ್, ಹರ್ಡರ್ ಮತ್ತು ಹಂಬೋಲ್ಟ್ ಇವರೆಲ್ಲರೂ ನುಡಿ ಬಗೆಗೆ ಮಂಡಿಸಿದ ಚಿಂತನೆಗಳನ್ನು ಬಿಡಿಸಿ ತೋರಿಸುವ ಮೂಲಕ ನುಡಿ ಅಳಿವಿನ ಕುರಿತ ಗ್ರಹಿಕೆ ಎಷ್ಟೊಂದು ಸಂಕೀರ್ಣವಾಗಿದೆ ಎಂಬುದು ಇಲ್ಲಿ ಸ್ಪಷ್ಟವಾಗಿದೆ.

ಸಪೀರ್-ವೂರ್ಫ್ ಪ್ರಮೇಯ ನುಡಿ ಸಾಪೇಕ್ಷವಾದ, ನುಡಿ ವಿಧಿವಾದ ಎಂಬ ಮಾದರಿಗಳ ಮೂಲಕ ಸಮುದಾಯಗಳ ಚಿಂತನಾ ಕ್ರಮ, ಲೋಕದೃಷ್ಟಿಗಳು ಮಂಡಿತವಾಗುವ ಬಗೆಯಲ್ಲಿ ನುಡಿಯ ಪ್ರಭಾವ ಮತ್ತು ಲೋಕದೃಷ್ಟಿಗಳು ರೂಪು ತಳೆಯುವ ನೆಲೆಯನ್ನು ನುಡಿ ಹೇಗೆ ನಿಯಂತ್ರಿಸುತ್ತದೆ ಅನ್ನುವುದು ಖಚಿತವಾಗಿದೆ. 'ನುಡಿ' ಮತ್ತು 'ಚಿಂತನೆ'ಗಳ ನಡುವಣ ನಂಟಸ್ತಿಕೆಯನ್ನು ಪರೀಕ್ಷಿಸಿ ನೋಡಲು ಮೈದಾಳಿದ ನಾಲ್ಕು ಪ್ರಮುಖ ಪ್ರಮೇಯಗಳನ್ನು ವಿವರವಾಗಿ ಚರ್ಚಿಸಲಾಗಿದೆ. ಒಂದೊಂದು ಪ್ರಮೇಯ ವೈಚಾರಿಕ ಬುನಾದಿಯನ್ನು ಖಚಿತವಾಗಿ ವಿಶ್ಲೇಷಿಸಲಾಗಿದೆ. ಚಾಮ್‌ಸ್ಕಿ, ಪಿಂಕರ್ ಮೊದಲಾದವರು ಮಂಡಿಸಿದ ವಿಶ್ವಾತ್ಮಕವಾದವನ್ನು ಅತ್ಯಂತ ನಿಚ್ಚಳವಾಗಿ ನಿರ್ವಚಿಸಲಾಗಿದೆ. ಈ ವಾದಕ್ಕೆ ಬೆಂಬಲವಾಗಿರುವ ವೈಚಾರಿಕತೆಯ ಬುನಾದಿಯೇ ಇದಕ್ಕೆ ಕಾರಣ.

ನುಡಿ ಅಳಿವು ಮತ್ತು ಪಲ್ಲಟ ಕುರಿತು ನಡೆದಿರುವ ಅಧ್ಯಯನದ ದೃಷ್ಟಿಕೋನಕ್ಕೆ ವ್ಯತಿರಿಕ್ತವಾದ ದೃಷ್ಟಿಕೋನಗಳನ್ನು ಕೆವಿಎನ್ ಅವರು ಇಲ್ಲಿ ಮಂಡಿಸಿದ್ದಾರೆ. ಆದ್ದರಿಂದ ನುಡಿಗಳ ಅಳಿವನ್ನು ಕುರಿತು ಬೇರೆ ದಿಕ್ಕಿನ ನೋಟವನ್ನು ಪುಸ್ತಕದ ಚರ್ಚೆಗಳುದ್ದಕ್ಕೂ ಕಾಣುತ್ತೇವೆ. ಇಲ್ಲಿ ಮಂಡಿತವಾಗಿರುವ ಚರ್ಚೆಗಳನ್ನು ಕೇವಲ ಬೇರೆ ಅಥವಾ ಪರ್ಯಾಯ ಎಂದು ಬಣ್ಣಿಸಿದರೆ ತಪ್ಪಾಗುತ್ತದೆ. ಏಕೆಂದರೆ, ಇಲ್ಲಿಯ ಚರ್ಚೆಗಳ ಹೊರಚಾಚು, ನುಡಿ ಅಳಿವಿಗೂ ಮತ್ತು ಆ ನುಡಿಯನ್ನಾಡುವ ಸಮುದಾಯಕ್ಕೂ ಏನು ಸಂಬಂಧ? ನುಡಿ ಅಳಿವಿನ ಪರಿಣಾಮದಿಂದ ಆಯಾ ಸಮುದಾಯದ ಮೇಲೆ ಏನೆಲ್ಲ ಪ್ರಭಾವಗಳು ಉಂಟಾಗುತ್ತವೆ, ಅವುಗಳನ್ನು ತಾತ್ವಿಕವಾಗಿ ಮತ್ತು ಪ್ರಾಯೋಗಿಕವಾಗಿ ಅರ್ಥೈಸುವ ಮಾದರಿಗಳನ್ನು ಈ ಪುಸ್ತಕ ಪ್ರಚುರಪಡಿಸುತ್ತದೆ. ಒಂದು ನುಡಿ ಸಮುದಾಯ ಇನ್ನೊಂದು ನುಡಿ ಸಮುದಾಯಕ್ಕೆ ಅಧೀನವಾಗುವ ಪ್ರಸಂಗಗಳು ಏಕೆ ಒದಗಿ ಬರುತ್ತವೆ ಅನ್ನುವುದನ್ನು ಅರಿಯಲು ಈ ಪುಸ್ತಕ ನಮಗೆ ಒತ್ತಾಸೆಯಾಗಿರುತ್ತದೆ. ಯಾವುದೇ ಸಮುದಾಯ ತನ್ನ ಬದುಕಿನ ಹೋರಾಟದಲ್ಲಿ ತನ್ನ ನುಡಿಯನ್ನು ಕಳೆದುಕೊಂಡರೆ, ಆ ಸಮುದಾಯ ಇಡಿಯಾಗಿ ಊನಗೊಳ್ಳಲಾರದು ಅನ್ನುವ ಎಚ್ಚರಿಕೆಯ ಮಾತು ಈ ಪುಸ್ತಕದ ಚರ್ಚೆಗಳಲ್ಲಿ ಹೊರಹೊಮ್ಮಿರುವುದು ಗಮನಾರ್ಹ. ●